## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 979(1095) |
| ಸದಸ್ಯರ ಹೆಸರು | : | ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 27.08.2026 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ನಗರ ಯೋಜನೆಗೆ ಸಂಬಂಧಿಸಿದಂತೆ ನಿರ್ಣಯಗಳನ್ನು ಕೈಗೊಳ್ಳುವ ಅಧಿಕಾರಿ ಯಾರು; ನಗರ ಯೋಜನೆಗೆ ಸಂಬಂಧಿಸಿದಂತೆ ಪ್ರಾಧಿಕಾರದ ಆಯುಕ್ತರ ಪಾತ್ರವೇನು; ಪ್ರಾಧಿಕಾರದ ಆಯುಕ್ತರುಗಳು ನಗರ ಯೋಜನೆಗೆ ಸಂಬಂಧಿಸಿದಂತೆ ನಿರ್ಣಯಗಳನ್ನು ಕೈಗೊಳ್ಳಲು ತಾಂತ್ರಿಕವಾಗಿ ನೈಪುಣ್ಯತೆ ಹೊಂದಿರುವರೇ? | • ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರನ್ವಯ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹಾಗೂ ಆಡಳಿತಾತ್ಮಕ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಾರೆ. ಆಯುಕ್ತರಿಗೆ ಸದರಿ ಕಾಯ್ದೆಯ ಕಲಂ 13 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಆಯುಕ್ತರು ಕರ್ತವ್ಯ ನಿರ್ವಹಿಸುತ್ತಾರೆ.<br><br>• ತಾಂತ್ರಿಕವಾಗಿ ನೈಪುಣ್ಯತೆ ಹೊಂದಿರುವ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ನಗರ ಯೋಜಕ ಸದಸ್ಯರು ಪ್ರಾಧಿಕಾರಗಳಲ್ಲಿ ನಗರ ಯೋಜನೆಗೆ ಸಂಬಂಧಿಸಿದ ವಿಷಯಗಳನ್ನು ತಾಂತ್ರಿಕವಾಗಿ ಪರಿಶೀಲಿಸಿ ಆಯುಕ್ತರಿಗೆ ಅಭಿಪ್ರಾಯವನ್ನು ನೀಡುತ್ತಾರೆ.<br><br>• ನಂತರ ಅನುಮೋದನೆಗೊಂಡ ವಿಷಯಗಳನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ ಸಭೆಯ ತೀರ್ಮಾನದಂತೆ ಕ್ರಮ ಜರುಗಿಸಲಾಗುತ್ತದೆ.<br><br>(ಆಯುಕ್ತರ ಅಧಿಕಾರಗಳು ಮತ್ತು ಕರ್ತವ್ಯಗಳ ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ). |
| ಆ) | ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರ ನಿಯೋಜನೆಗೆ ಸಂಬಂಧಿಸಿದಂತೆ | ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2 ರ 1 ರಿಂದ 10ನೇ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. |

<table>
<tr>
<td></td>
<td>ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2 ರ ವರದಿ ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ; ಸಲ್ಲಿಸಲಾಗಿದ್ದಲ್ಲಿ ಸದರಿ ವರದಿಯ ಶಿಫಾರಸ್ಸುಗಳಿಗೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡ ಕ್ರಮಗಳೇನು;</td>
<td rowspan="2">ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2 ರ 3ನೇ ವರದಿಯಲ್ಲಿನ ಕಂಡಿಕೆ 119(7) ರಲ್ಲಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದೆ.<br><br>"It is informed that officers who do not have any background in urban administration from departments such as Education, Animal Husbandry Treasury are being posted as Commissioners of UDAs. work would suffer, in terms of both quality and efficiency, because such officers may take a long time to familiarize themselves with town planning provisions. It is therefore recommended that sec 12(1) of the KUDA Act 1987 be amended to provide that the officers "not below the rank of Group A in Town and Country Planning Department or KAS or KMAS officers" be posted as UDA Commissioner".<br><br>ಸದರಿ ಶಿಫಾರಸ್ಸಿಗೆ ಸಂಬಂಧಿಸಿದಂತೆ, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ-1987 ರ ಕಲಂ 12 (1) ಕ್ಕೆ ಈ ಕೆಳಕಂಡಂತೆ ತಿದ್ದುಪಡಿ ತರಲು ಕಾನೂನು ಇಲಾಖೆ, ಆರ್ಥಿಕ ಇಲಾಖೆ ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಸಹಮತಿಯನ್ನು ಪಡೆಯಲಾಗಿರುತ್ತದೆ.<br><br>"12. Appointment of Commissioner "(1) The Government shall appoint an Officer not below the rank of Group 'A' Officer from the Department of Town and Country Planning or Karnataka Administrative Service Officer (KAS) or Karnataka Municipal Administration Service Officer (KMAS) to be the Commissioner for the Authority"</td>
</tr>
<tr>
<td>ಇ)</td>
<td>ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2 ರ ವರದಿಯನ್ವಯ ನಗರ ಯೋಜನೆಯಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ನಗರ ಯೋಜನೆ ವಿಷಯದಲ್ಲಿ ಪರಿಣಿತಿ/ನೈಪುಣ್ಯತೆ ಹೊಂದಿರುವ ಮತ್ತು ರಾಜ್ಯದ ನಗರ ಯೋಜನಾ ಪ್ರಾಧಿಕಾರಗಳಲ್ಲಿ ಸದಸ್ಯ ಕಾರ್ಯದರ್ಶಿಯಾಗಿ ಹಾಗೂ ನಗರಾಭಿವೃಧ್ಧಿ ಪ್ರಾಧಿಕಾರಗಳಲ್ಲಿ ನಗರ ಯೋಜಕ ಸದಸ್ಯರಾಗಿ ಕಾರ್ಯನಿರ್ವಹಿಸಿ ಅನುಭವವುಳ್ಳ ನಗರ ಯೋಜನಾ ಉಪ ನಿರ್ದೇಶಕರು ಹಾಗೂ ಮೇಲ್ಪಟ್ಟ ಅಧಿಕಾರಿಗಳನ್ನು ಪ್ರಾಧಿಕಾರದ ಆಯುಕ್ತರನ್ನಾಗಿ ನಿಯೋಜಿಸಲು ಸರ್ಕಾರಕ್ಕೆ ಇರುವ ತೊಡಕುಗಳೇನು?</td>
</tr>
</table>

| | | |
|---|---|---|
| | | ಮೇಲ್ಕಂಡಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ-1987 ರ ಕಲಂ 12 (1) ಕ್ಕೆ ತಿದ್ದುಪಡಿ ತರುವ ಪ್ರಕ್ರಿಯೆಯು ಸರ್ಕಾರದ ಹಂತದಲ್ಲಿ ಜಾರಿಯಲ್ಲಿರುತ್ತದೆ. |

ಕಡತ ಸಂಖ್ಯೆ:ನಅಇ 290 ಬೆಮಪ್ರಾ 2026

(ಡಾ. ಯತೀಂದ್ರ ಸಿದ್ಧರಾಮಯ್ಯ)
ಮಾನ್ಯ ನಗರಾಭಿವೃದ್ಧಿ ಸಚಿವರು

(3) ಸರ್ಕಾರವು ತನ್ನ ವಿವೇಚನೆಗನುಗುಣವಾಗಿ ಆಯುಕ್ತನ ಗೈರು ಹಾಜರಿಗೆ ಸಂಬಂಧಿಸಿದಂತೆ ರಜೆ ವೇತನವನ್ನು ಮಂಜೂರು ಮಾಡಬಹುದು. ಈ ರೀತಿ ಮಂಜೂರು ಮಾಡಿದಂತಹ ಪ್ರತಿಯೊಂದು ಆದೇಶದ ಪ್ರತಿಯನ್ನು ಅಧ್ಯಕ್ಷನಿಗೆ ಕಳುಹಿಸತಕ್ಕದ್ದು.

**13. ಆಯುಕ್ತನ ಅಧಿಕಾರಗಳು ಮತ್ತು ಕರ್ತವ್ಯಗಳು (Powers and duties of the Commissioner).**–(1) ಆಯುಕ್ತನು ಪ್ರಾಧಿಕಾರದ ಮುಖ್ಯ ನಿರ್ವಹಣಾಧಿಕಾರಿ ಮತ್ತು ಆಡಳಿತಾಧಿಕಾರಿಯಾಗಿರತಕ್ಕದ್ದು.

(2) ಆಯುಕ್ತನು ಈ ಅಧಿನಿಯಮದಡಿಯಲ್ಲಿ ಅಥವಾ ತತ್ಕಾಲಕ್ಕೆ ಜಾರಿಯಲ್ಲಿರುವಂಥ ಇನ್ನಾವುದೇ ಕಾಯಿದೆಯಡಿಯಲ್ಲಿ ಅಥವಾ ಅದರ ಮೂಲಕ ಆತನಿಗೆ ವಹಿಸಿದಂತಹ ಕರ್ತವ್ಯಗಳನ್ನು ನಿರ್ವಹಿಸುವುದರೊಂದಿಗೆ.–

(ಎ) ಪ್ರಾಧಿಕಾರದ ನಿರ್ಣಯವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸತಕ್ಕದ್ದು:

ಪರಂತು ಯಾವುದೇ ನಿರ್ಣಯವು, ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಉಪಬಂಧಗಳಿಗೆ ಅಥವಾ ಈ ಅಧಿನಿಯಮದಡಿಯಲ್ಲಿ ಅಥವಾ ಇತರ ಯಾವುದೇ ಕಾನೂನಿನ ಅಡಿಯಲ್ಲಿ ಮಾಡಿದಂತಹ ಯಾವುದೇ ನಿಯಮ, ಅಧಿಸೂಚನೆ, ವಿನಿಯಮ ಅಥವಾ ಉಪ–ಕಾಯಿದೆಗಳಿಗೆ ಅಥವಾ ಸರ್ಕಾರವು ಹೊರಡಿಸಿದಂತಹ ಯಾವುದೇ ಆದೇಶಗಳಿಗೆ ವಿರುದ್ಧವಾಗಿರುವುದೆಂದು ಅಥವಾ ಪ್ರಾಧಿಕಾರದ ಹಿತಾಸಕ್ತಿಗಳಿಗೆ ಹಾನಿಕಾರಕ ಅಥವಾ ಧಕ್ಕೆಯುಂಟಾಗಬಹುದೆಂದು ಆಯುಕ್ತನು ಅಭಿಪ್ರಾಯಪಟ್ಟಲ್ಲಿ, ಅಂತಹ ನಿರ್ಣಯವನ್ನು ಕೈಗೊಂಡ ಹದಿನೈದು ದಿವಸಗಳೊಳಗೆ ಆತನು ಅದನ್ನು ಸರ್ಕಾರಕ್ಕೆ ಮುಂದಿನ ಆದೇಶಕ್ಕಾಗಿ ಕಳುಹಿಸತಕ್ಕದ್ದು ಮತ್ತು ಪ್ರಾಧಿಕಾರಕ್ಕೆ ಅದರ ಮುಂದಿನ ಸಭೆಯಲ್ಲಿ ತಾನು ಕೈಗೊಂಡ ಕ್ರಮದ ಬಗ್ಗೆ ತಿಳಿಸತಕ್ಕದ್ದು, ಈ ರೀತಿ ಕೋರಿರುವ ಸ್ಪಷ್ಟೀಕರಣದ ಬಗ್ಗೆ ಸರ್ಕಾರದ ಆದೇಶವು ಸ್ವೀಕೃತವಾಗುವವರೆಗೆ ಅಂತಹ ನಿರ್ಣಯವನ್ನು ಜಾರಿಗೊಳಿಸಲು ಆತನು ಬದ್ಧನಾಗಿರತಕ್ಕದ್ದಲ್ಲ;

(ಬಿ) ಪ್ರಾಧಿಕಾರದ ಪತ್ರ ವ್ಯವಹಾರಗಳನ್ನು ರಕ್ಷಿಸಿಡತಕ್ಕದ್ದು;

(ಸಿ) ಸರ್ಕಾರವು ನಿರ್ದೇಶಿಸಿದಂತಹ ಅಂತಹ ಯೋಜನೆಗಳು ಮತ್ತು ಕಾಮಗಾರಿಗಳನ್ನು ನಿರ್ವಹಿಸತಕ್ಕದ್ದು ಮತ್ತು ಜಾರಿಗೊಳಿಸತಕ್ಕದ್ದು ಮತ್ತು ತತ್ಸಂಬಂಧವಾದ ಅಗತ್ಯ ವೆಚ್ಚವನ್ನು ಮಾಡತಕ್ಕದ್ದು;

(ಡಿ) ಪ್ರಾಧಿಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದು;

(ಇ) ಪ್ರಾಧಿಕಾರದ ಲೆಕ್ಕಪತ್ರಗಳ ನಿರ್ವಹಣೆಯನ್ನು ಮಾಡತಕ್ಕದ್ದು ಮತ್ತು ಪ್ರಾಧಿಕಾರದ ಲೆಕ್ಕಪತ್ರಗಳ ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

(ಎಫ್) ಆಡಳಿತ ನಿರ್ವಹಣೆಯಲ್ಲಿ ಪ್ರಾಧಿಕಾರದ ಲೆಕ್ಕಪತ್ರಗಳು, ನಡಾವಳಿಗಳಿಗೆ ಸಂಬಂಧಿಸಿದಂತೆ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣಾಧಿಕಾರವನ್ನು ಚಲಾಯಿಸತಕ್ಕದ್ದು ಮತ್ತು ಪ್ರಾಧಿಕಾರದ ಲೆಕ್ಕಪತ್ರಗಳು ಮತ್ತು ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ಪ್ರಕರಣ 52ರ ಉಪ–ಪ್ರಕರಣ (1)ರಲ್ಲಿ ನಿರ್ದಿಷ್ಟಪಡಿರುವಂತಹ ವ್ಯಾಪ್ತಿಯಲ್ಲಿ ಅಂತಹ ಅಧಿಕಾರಿಗಳು ಮತ್ತು ಸಿಬ್ಬಂದಿಗಳ

ಸೇವೆಗೆ ಸಂಬಂಧಿಸಿದ ಪ್ರತಿಯೊಂದು ವಿಷಯಗಳು, ಅವರುಗಳ ವೇತನ, ಸವಲತ್ತುಗಳು ಮತ್ತು ಭತ್ಯೆಗಳ ವಿಷಯಗಳನ್ನು ವಿಲೇ ಮಾಡತಕ್ಕದ್ದು;

(ಜಿ) ಪ್ರಾಧಿಕಾರದ ನಡಾವಳಿಗಳ ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಸರ್ಕಾರವು ಸಲ್ಲಿಸುವಂತೆ ನಿರ್ದೇಶಿಸುವಂತಹ ಯಾವುದೇ ವರದಿಗಳು, ಮಾಹಿತಿಗಳು ಇತ್ಯಾದಿಗಳನ್ನು ಕಾಲಕಾಲಕ್ಕೆ ಸಲಿಸುವುದು; ಮತ್ತು

(ಎಚ್) ಎಲ್ಲಾ ಪರವಾನಗಿಗಳು, ಆದೇಶಗಳು, ತೀರ್ಮಾನಗಳು, ನೋಟೀಸುಗಳು ಮತ್ತಿತರ ಪ್ರಾಧಿಕಾರದ ದಸ್ತಾವೇಜುಗಳನ್ನು ಮತ್ತು ಪ್ರಾಧಿಕಾರದ ಆದೇಶಗಳನ್ನು ತಾನು ಸಹಿ ಮಾಡುವ ಮೂಲಕ ಅಧಿಕೃತಗೊಳಿಸುವುದು.

(3) ಆಯುಕ್ತನು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳಡಿಯಲ್ಲಿ ಪ್ರಾಧಿಕಾರದ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ ತತ್ಕಾಲಕ್ಕೆ ಜಾರಿಯಲ್ಲಿರುವಂತಹ ಎಲ್ಲಾ ನಿಯಮಗಳಡಿಯಲ್ಲಿ ಉನ್ನತ ರಾಜ್ಯ ಸರ್ಕಾರದ ದೊಡ್ಡ ಇಲಾಖೆಯ ಮುಖ್ಯಾಧಿಕಾರಿಯು ಹೊಂದಿರುವಂತಹ ಅಧಿಕಾರಗಳನ್ನು ಹೊಂದಿರತಕ್ಕದ್ದು.

**14. ಪ್ರಾಧಿಕಾರದ ಉದ್ದೇಶಗಳು (Objects of the Authority).**–ಪ್ರಾಧಿಕಾರದ ಉದ್ದೇಶಗಳು ನಗರ ಪ್ರದೇಶಗಳ ಅಭಿವೃದ್ಧಿಯನ್ನು ಯೋಜಿಸುವುದು, ಉತ್ತೇಜಿಸುವುದು ಮತ್ತು ಸಂರಕ್ಷಿಸುವುದು ಮತ್ತು ಈ ಉದ್ದೇಶಗಳಿಗಾಗಿ ಪ್ರಾಧಿಕಾರವು ತನ್ನ ವ್ಯಾಪ್ತಿಯಲ್ಲಿರುವ ನಗರ ಪ್ರದೇಶದ ಅಥವಾ ನಗರ ಪ್ರದೇಶದ ಹೊರಗಿರುವ ಯಾವುದೇ ಚರ ಹಾಗೂ ಸ್ಥಿರಾಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳುವ, ಹೊಂದುವ, ನಿರ್ವಹಣೆ ಮಾಡುವ ಮತ್ತು ವಿಲೇವಾರಿ ಮಾಡುವ ಮತ್ತು ಕಟ್ಟಡಗಳ ನಿರ್ಮಾಣ, ಇಂಜನಿಯರಿಂಗ್ ಕಾಮಗಾರಿಗಳು ಮತ್ತಿತರರ ಕಾಮಗಾರಿಗಳಿಗೆ ಮತ್ತು ಸಾಮಾನ್ಯವಾಗಿ ಅಭಿವೃದ್ಧಿಗಾಗಿ ಅವಶ್ಯವಿರುವ ಎಲ್ಲಾ ಅಗತ್ಯವಾದ ಮತ್ತು ಸೂಕ್ತವಾದ ವಸ್ತುಗಳಿಗಾಗಿ ಮತ್ತು ಅದರ ಇತರ ಪ್ರಾಸಂಗಿಕ ಉದ್ದೇಶಗಳಿಗಾಗಿ ಅಧಿಕಾರವನ್ನು ಹೊಂದಿರತಕ್ಕದ್ದು.

## ಅಧ್ಯಾಯ III
## ಅಭಿವೃದ್ಧಿ ಯೋಜನೆಗಳು

**15. ಅಭಿವೃದ್ಧಿ ಇತ್ಯಾದಿಗಳಿಗಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮತ್ತು ವೆಚ್ಚ ಮಾಡುವ ಪ್ರಾಧಿಕಾರದ ಅಧಿಕಾರ (Power of Authority to undertake works and incur expenditure for development *etc.*).**–(1) ಪ್ರಾಧಿಕಾರವು.–

(ಎ) ನಗರ ಪ್ರದೇಶಗಳ ಅಭಿವೃದ್ಧಿಗಾಗಿ ವಿವರವಾದ ಯೋಜನೆಗಳನ್ನು ತಯಾರಿಸತಕ್ಕದ್ದು (ಇನ್ನು ಮುಂದೆ 'ಅಭಿವೃದ್ಧಿ ಯೋಜನೆಗಳು' ಎಂದು ಉಲ್ಲೇಖಿಸತಕ್ಕದ್ದು); ಮತ್ತು

(ಬಿ) ಸರ್ಕಾರದ ಪೂರ್ವಾನುಮತಿಯೊಂದಿಗೆ, ಕಾಲಕಾಲಕ್ಕೆ ನಗರ ಪ್ರದೇಶಗಳ ಅಭಿವೃದ್ಧಿಗಾಗಿ ಯಾವುದೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳತಕ್ಕದ್ದು ಮತ್ತು ಅದರ ಸಲುವಾಗಿ ಮತ್ತು ಯಾವುದೇ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಲು ಮತ್ತು ಅಮಲ್ಜಾರಿಗೊಳಿಸಲು ವೆಚ್ಚವನ್ನು ಭರಿಸತಕ್ಕದ್ದು.

(2) ಪ್ರಾಧಿಕಾರವು ಕಾಲಕಾಲಕ್ಕೆ ಯಾವುದೇ ನೂತನ ಮತ್ತು ಹೆಚ್ಚುವರಿ ಅಭಿವೃದ್ಧಿ ಕಾಮಗಾರಿಗಳನ್ನು.–

(i) ತಾನೇ ಸ್ವತಃ, ಒಂದು ವೇಳೆ ಸಾಕಷ್ಟು ಸಂಪನ್ಮೂಲಗಳು ಲಭ್ಯವಿದೆಯೆಂಬ ತೃಪ್ತಿಯಿದ್ದಲ್ಲಿ; ಅಥವಾ